JETIR.ORG ISSN: 2349-5162 | ESTD Year : 2014 | Monthly Issue
JOURNAL OF EMERGING TECHNOLOGIES AND INNOVATIVE RESEARCH (JETIR)
An International Scholarly Open Access, Peer-reviewed, Refereed Journal

# ಮಾದಪ್ಪನ ಕಥೆಯಲ್ಲಿ ಕುಲ ಸಮುದಾಯಗಳ ಪ್ರತಿನಿಧೀಕರಣ

**ಡಾ. ಜಯಂತ್ ಎಂ.,**
ಸಹಾಯಕ ಪ್ರಧ್ಯಾಪಕರು,
ದಯಾನಂದ ಸಾಗರ ಇಂಜಿನಿಯರಿಂಗ್ ಕಾಲೇಜು,
ಬೆಂಗಳೂರು-560078 ,ಕರ್ನಾಟಕ, ಭಾರತ.

*Abstract :* ಮಾದಪ್ಪನ ಕಥೆಯೊಳಗೆ ಭಿನ್ನ ಕುಲ ಸಮುದಾಯಗಳು ಕಂಡು ಬರುತ್ತವೆ. ಈ ಕುಲ ಸಮುದಾಯಗಳು ವರ್ಣವ್ಯವಸ್ಥೆಯ ಜಾತಿಗಳಲ್ಲ. ಇಡೀ ಕಥೆಯಲ್ಲಿ ಎಲ್ಲಾ ಚತುರ್ವರ್ಣಗಳ ಬಗ್ಗೆ ವಿವರಗಳು ಕಾಣಸಿಗುವುದಿಲ್ಲ. ಇಲ್ಲಿನ ಕುಲಗಳ ಪ್ರತಿನಿಧೀಕರಣ ವಿಭಿನ್ನವಾಗಿ ಕಂಡುಬರುತ್ತದೆ. ಜೊತೆಗೆ ಮಾದಪ್ಪನ ಕಥೆಯನ್ನು ಹಾಡುವ ಗುಡ್ಡರು ಹದಿನೆಂಟು ಕುಲಗಳ ಸಂಘಟಿತ ರೂಪವಾಗಿ ಕಂಡುಬರುತ್ತಾರೆ. ಇಂದಿನ ಸಂದರ್ಭದಲ್ಲಿ ಏಕರೂಪತೆಯ ಭಾಷಣ ಮಾಡುವವರಿಗೆ ಈ ಬಹುರೂಪಿಯಾದ ಕನ್ನಡ ಸಮುದಾಯಗಳ ಪರಿಚಯ ಮಾಡುವುದರ ಜೊತೆಗೆ, ಮಾದಪ್ಪ ಕಥೆಯ ಒಳಗೆ ಕುಲ ಸಮುದಾಯಗಳು ಹೇಗೆ ಪ್ರತಿನಿಧಿತವಾಗಿದೆ ಎಂಬುದನ್ನು ಇಲ್ಲಿ ಚರ್ಚಿಸುವ ಅಗತ್ಯವಿದೆ ಎಂಬುದು ನನ್ನ ಅನಿಸಿಕೆ.

***IndexTerms* - ಕುಲ, ಸಮುದಾಯ, ಮಾದಪ್ಪ, ಕುಲ, ಕಥೆ**

**ಪೀಠಿಕೆ**

ಮಾದಪ್ಪನ ಕಥೆಯೊಳಗೆ ಭಿನ್ನ ಕುಲ ಸಮುದಾಯಗಳು ಕಂಡು ಬರುತ್ತವೆ. ಈ ಕುಲ ಸಮುದಾಯಗಳು ವರ್ಣವ್ಯವಸ್ಥೆಯ ಜಾತಿಗಳಲ್ಲ. ಇಡೀ ಕಥೆಯಲ್ಲಿ ಎಲ್ಲಾ ಚತುರ್ವರ್ಣಗಳ ಬಗ್ಗೆ ವಿವರಗಳು ಕಾಣಸಿಗುವುದಿಲ್ಲ. ಇಲ್ಲಿನ ಕುಲಗಳ ಪ್ರತಿನಿಧೀಕರಣ ವಿಭಿನ್ನವಾಗಿ ಕಂಡುಬರುತ್ತದೆ. ಜೊತೆಗೆ ಮಾದಪ್ಪನ ಕಥೆಯನ್ನು ಹಾಡುವ ಗುಡ್ಡರು ಹದಿನೆಂಟು ಕುಲಗಳ ಸಂಘಟಿತ ರೂಪವಾಗಿ ಕಂಡುಬರುತ್ತಾರೆ. ಇಂದಿನ ಸಂದರ್ಭದಲ್ಲಿ ಏಕರೂಪತೆಯ ಭಾಷಣ ಮಾಡುವವರಿಗೆ ಈ ಬಹುರೂಪಿಯಾದ ಕನ್ನಡ ಸಮುದಾಯಗಳ ಪರಿಚಯ ಮಾಡುವುದರ ಜೊತೆಗೆ, ಮಾದಪ್ಪ ಕಥೆಯ ಒಳಗೆ ಕುಲ ಸಮುದಾಯಗಳು ಹೇಗೆ ಪ್ರತಿನಿಧಿತವಾಗಿದೆ ಎಂಬುದನ್ನು ಇಲ್ಲಿ ಚರ್ಚಿಸುವ ಅಗತ್ಯವಿದೆ ಎಂಬುದು ನನ್ನ ಅನಿಸಿಕೆ.

ಮಾದಪ್ಪನ ಪರಂಪರೆಯನ್ನು ಉಳಿಸಿಕೊಂಡು ಬಂದವರು ಈ ಗುಡ್ಡರು. ಇವರನ್ನು ಗುಡ್ಡಪ್ಪ, ಗುಡ್ಡ, ದ್ಯಾವರಗುಡ್ಡ ಎಂದೆಲ್ಲಾ ಕರೆಯುತ್ತಾರೆ. ಗುಡ್ಡರು ಮಾದಪ್ಪನ ಕಥೆ, ಹಾಡುಗಳನ್ನು ಹಾಡಿಕೊಂಡು ಇಂದಿಗೂ ಜೀವನವನ್ನು ನಡೆಸುತ್ತಿದ್ದಾರೆ. ಮಾದಪ್ಪನ ಒಕ್ಕಲಿನ ಸಮುದಾಯಗಳ ಒಳಗೆ ಗುಡ್ಡರನ್ನು ಮಾದಪ್ಪನ ಸಿಸುಮಕ್ಕಳೆಂದು ಕರೆಯುತ್ತಾರೆ. ತಳಸಮುದಾಯಗಳಾದ ಉಪ್ಪಲಿಗರು, ಕುರುಬರು, ಮಡಿವಾಳರು, ಗಂಗಾಮತಸ್ಥರು, ಗಾಣಿಗರು, ಮಾದಿಗರು, ಹೊಲೆಯರು, ಕುಂಬಾರರು, ಒಕ್ಕಲಿಗರುಗಳ ಸಮುದಾಯದಲ್ಲಿ ಮಾದಪ್ಪನ ಗುಡ್ಡರುಗಳು ಕಂಡುಬರುತ್ತಾರೆ. ಗುಡ್ಡರಾಗಿ ದೀಕ್ಷೆ ಪಡೆಯಲು ಯಾವುದೇ ಜಾತಿ, ಬಡವ–ಶ್ರೀಮಂತ, ಹೆಣ್ಣು–ಗಂಡು ಎಂಬ ಬೇಧಭಾವವಿಲ್ಲ. ಆದ್ದರಿಂದ ದ್ಯಾವರ ಗುಡ್ಡರಂತಾ ದೀಕ್ಷಾ ಪರಂಪರೆ ತಳವರ್ಗದ ಎಲ್ಲಾ ಕುಲ ಸಮುದಾಯಗಳನ್ನು ಒಗ್ಗೂಡಿಸುವ ಪ್ರಕ್ರಿಯೆಯಾಗಿ ಕಂಡುಬರುವುದು ವಿಶೇಷವೆನಿಸುತ್ತದೆ.

ಕೆ. ಕೇಶವನ್ ಪ್ರಸಾದ್ ಅವರು ಸಂಪಾದಿಸಿರುವ “ಮಲೆಯ ಮಹದೇಶ್ವರ” ಕೃತಿಯ ಮುನ್ನುಡಿಯಲ್ಲಿ ಚಂದ್ರಶೇಖರ ಕಂಬಾರರು “ಮಾದಪ್ಪನ ಕಾವ್ಯವನ್ನು ಬುಡಕಟ್ಟು ಕಾವ್ಯಕ್ಕೆ ಸೇರಿಸಿ ಅದರಿಂದ ಕನ್ನಡ ಸಂಸ್ಕೃತಿಯನ್ನು ಹುಡುಕುವ ಕಾರ್ಯಕ್ಕೆ ನಾವು ಕೈ ಹಾಕಿದ್ದೇವೆ. ಒಂದು ವಿಶಿಷ್ಟವಾದ

ಭೂಪ್ರದೇಶದ ಅಥವಾ ಬುಡಕಟ್ಟಿನ ಪರಂಪರೆಯಲ್ಲಿ ಸೃಷ್ಟಿಯಾಗಿರುವ ದೈವಪುರುಷರು ಇವತ್ತಿನ ಸಂಸ್ಕೃತಿ ಚಿಂತಕರಿಗೆ ಮುಖ್ಯವಸ್ತುವಾಗಬೇಕಾಗಿದೆ. ಕಾಡು ಮತ್ತು ನಾಡಿನ ಹತ್ತಾರು ಜನ ವರ್ಗಗಳು ಪೂಜಿಸುವ ದೈವಗಳು ಮತ್ತು ಅದೈವಗಳ ಬಗ್ಗೆ ಅವರು ಕಟ್ಟಿಕೊಂಡಿರುವ ಕಥನಗಳು ನೂರಾರು. ಈ ಕಥನಗಳೇ ನಿಜವಾದ ಅರ್ಥದಲ್ಲಿ ನಮ್ಮ ಸಂಸ್ಕೃತಿಯ ಇತಿಹಾಸವನ್ನು ನಿರೂಪಿಸಬಲ್ಲವು. ಇದುವರೆಗೆ ನಿರ್ಲಕ್ಷಿಸಲ್ಪಟ್ಟ ಜನಗಳಿಗೆ ಕೂಡ ಶ್ರೀಮಂತ ಸಂಸ್ಕೃತಿ ಇದೆ ಎಂಬುದನ್ನು, ಆ ಸಂಸ್ಕೃತಿಗೆ ಒಂದು ಪರಂಪರೆ ಇದೆ ಎಂಬುದನ್ನು ಈ ಪರಂಪರೆಯೇ ಒಂದು ನಾಡಿನ ವಿವೇಕ ಮತ್ತು ಜ್ಞಾನವನ್ನು ಕಾಪಾಡಿಕೊಂಡು ಬಂದಿದೆ ಎಂಬುದನ್ನು ನಾವು ತಿಳಿಸುತ್ತೇವೆ"[1] ಎಂದಿದ್ದಾರೆ. ಕಂಬಾರರ ಮೇಲಿನ ಮಾತುಗಳು ಸಬಾಲ್ಟ್ರರ್ನ್ ಮಾದರಿಯ ಚಿಂತನೆಯಾಗಿ ಕಂಡುಬರುತ್ತದೆ.

"ಭಾರತದಂತಹ ದೇಶ ಬಹುಮುಖೀ ಸಂಸ್ಕೃತಿಯನ್ನು ಪ್ರತಿನಿಧಿಸುವ ಒಂದು ಸಂಕೀರ್ಣ ಭೂಪ್ರದೇಶವಾಗಿದ್ದು ಕೆಲವರು ಊಹಿಸುವಂಥ ಒಂದೇ ಸಂಸಕೃತಿ ಇರಲು ಸಾಧ್ಯವಿಲ್ಲ ಎಂಬ ತಿಳುವಳಿಕೆ ಗಟ್ಟಿಗೊಳ್ಳುತ್ತದೆ. ಪ್ರತಿಯೊಂದು ನೆಲದ ವಿವಿಧ ಭಾಷೆಗಳು, ಅಲ್ಲಿನ ಜನ, ಅವರ ಆಚಾರ ವಿಚಾರಗಳು, ರೂಢಿಸಿಕೊಂಡ ಮೌಲ್ಯ, ಅವರ ಲೋಕದೃಷ್ಟಿ ಇತ್ಯಾದಿಗಳನ್ನು ಅವಲೋಕಿಸಿದಾಗ ಸಾವಿರಾರು ಸಂಸ್ಕೃತಿ ವಿಶೇಷಗಳು ಕಣ್ಣ ಮುಂದೆ ತಾಕಲಾಡಿ ನಮ್ಮಲ್ಲಿ ದಿಗ್ಭ್ರಮೆ ಹುಟ್ಟಿಸುತ್ತದೆ. ವಾಸ್ತವವಾಗಿ ಸ್ಥಳೀಯವಾದ, ನೆಲದ ಗುಣ ಪಡೆದ, ಆಯಾ ಜನತೆಯ ಉಸಿರಿನೊಡನೆ ಬೆಳೆದು ಬಂದ ಈ ಸಾಂಸ್ಕೃತಿಕ ವಿಶೇಷಗಳು ಭಾರತೀಯ ಸಂಸ್ಕೃತಿಯ ಜೀವಕೋಶಗಳೇ ಹೊರತು "ಭಾರತಕ್ಕೆ ಒಂದೇ ಸಂಸ್ಕೃತಿ, ಎಂಬುದು ಸುಳ್ಳು ಎಂದೇ ಹೇಳಬೇಕಾಗುತ್ತದೆ. ಪವಾಡ ಪುರುಷರು, ಬೈರಾಗಿಗಳು, ಸಾಧಕರ ಮಹಿಮೆಗಳನ್ನು, ಅವರ ಜೀವನ ಪ್ರೀತಿಯ ವಿಶೇಷಗಳೆನಿಸಿದ ಮದ್ಯ, ಮಾಂಸ, ಮೈಥುನ, ಭಂಗಿ ಸೇವನೆಯಂಥ ನಿರಾಕರಿಸಲಾಗದ ವಿಚಾರಗಳನ್ನು, ಸ್ತ್ರೀ ಪ್ರಧಾನವಾದ ದ್ರಾವಿಡ ಮೂಲ ಮೌಲ್ಯಗಳನ್ನು ಹಾಗೂ ಈ ಮೂಲಕ ತಮ್ಮದೇ ನೆಲದ ಗುಣವನ್ನು ಸಹಜವಾಗಿ ಹೊರಸೂಸುವ ದೀರ್ಘ ಕಥಾನಕಗಳು ನಮ್ಮಲ್ಲಿವೆ. ಈ ಕಥನಗಳೇ ನಿಜವಾದ ಅರ್ಥದಲ್ಲಿ ನಮ್ಮ ಸಂಸ್ಕೃತಿಯ ಇತಿಹಾಸವನ್ನು ನಿರೂಪಿಸಬಲ್ಲಂಥ ಶಕ್ತಿಪಡೆದವುಗಳು. ಇತಿಹಾಸದ ಕಣ್ಣು ತೆರೆಸಿ ಜನಸಾಮಾನ್ಯರ ಇತಿಹಾಸಕ್ಕಾಗಿ ಒತ್ತಾಯಿಸಬಲ್ಲ, ಆ ಬಗೆಗಿನ ಅರಿವು ಮೂಡಿಸಬಲ್ಲ ಶಕ್ತಿ ಈ ಕಥನಗಳಿಗಿದೆ... ಮಾದಪ್ಪ, ಹೊಲೆಯನೆಂದು ಕರೆಯಲಾಗುವ ಮಂಟೇಸ್ವಾಮಿ, ದನ ಕಾಯುವ ಅನಾಥ ಜುಂಜಪ್ಪ, ಕುರಿ ಕಾಯುವ ಮೈಲಾರಲಿಂಗ, ಕಾಡು ಮತ್ತು ನಾಡಿನ ನಡುವೆ ಸಂಬಂಧ ಸ್ಥಾಪಿಸಿಕೊಳ್ಳಬಲ್ಲ ಇವರು ಪ್ರಕೃತಿಯಲ್ಲಿನ ದುಷ್ಟ ಮೃಗಗಳನ್ನು ಒಲಿಸಿಕೊಂಡು ಅವುಗಳನ್ನು ಸ್ನೇಹದಿಂದ ಕಾಣಬಲ್ಲವರು. ಬೇಟೆಗಾರರಂತೂ ಅಲ್ಲ"[2] ಮೇಲಿನ ಕೇಶವನ್ ಪ್ರಸಾದ್‌ರವರ ಮಾತುಗಳು ವರ್ತಮಾನವನ್ನು ಪ್ರಶ್ನಿಸುತ್ತವೆ. ಇಲ್ಲಿ ಏಕರೂಪಿ ಸಂಸ್ಕೃತಿಯನ್ನು ಸುಳ್ಳು ಎಂದೇ ಲೇಖಕರು ಹೇಳುತ್ತಾರೆ.

ಮಾದಪ್ಪನ ಕಥೆಯ ಒಳಗೆ ಕುಲದ ಉಲ್ಲೇಖಗಳು ಕೆಳಗಿನಂತೆ ಕಂಡುಬರುತ್ತದೆ.

"ಅಯ್ಯ ಕುಲದಲ್ಲಿ ಕುರುಬೊಕ್ಕಲುಗೌಡ
ನೀತಿಯೊಳಗೆ ನೀಲಯ್ಯ
ಜಾತಿಯೊಳಗ ಸ್ವಾಲುಗ...
ಕುಲದವರೆಲ್ಲ ಕೂಡವರೆ
ಜಾತಿಯವರೆಲ್ಲಾ ಸೇರವರೆ...
ದುಂಡೇಗೌಡ್ನ ಪೋಡಿಗ್ಹೋಡಿ
ಅವು ಜಾತಿಪದ್ಧತಿ ಕುಲಪದ್ಧತಿಯೆಂದರೆ
ಆ ಬೆಟ್ಟದ ಸ್ವಾಲುಗಳು"[3]

1. ಡಾ. ಕೆ. ಕೇಶವನ್ ಪ್ರಸಾದ್, ಮಲೆ ಮಾದೇಶ್ವರ, ಮುನ್ನುಡಿ
2. ಡಾ. ಕೆ. ಕೇಶವನ್ ಪ್ರಸಾದ್, ಮಲೆ ಮಾದೇಶ್ವರ, ಪು. V
3. ಡಾ. ಕೆ. ಕೇಶವನ್ ಪ್ರಸಾದ್ (ಸಂ), ಮಲೆ ಮಾದೇಶ್ವರ, ಪು. 124–125

ಇಲ್ಲಿ ಕಂಡು ಬಂದಿರುವ ಕುಲಗಳು ಸಾಮಾನ್ಯವಾಗಿ ವರ್ಣವ್ಯವಸ್ಥೆಯ ನಾಲ್ಕು ವರ್ಣಗಳ ಜಾತಿಗಳಲ್ಲ. ಇಲ್ಲಿ ಉಲ್ಲೇಖವಾಗಿರುವ ಕುಲಗಳು ಭಿನ್ನತೆಯಿಂದ ಕೂಡಿರುವ ಹೆಸರುಗಳು. ಮಾದಪ್ಪನ ಕಥೆಯಲ್ಲೆಲ್ಲೂ ಸಹ ವರ್ಣ ವ್ಯವಸ್ಥೆಯ ವಿವರಗಳು ಕಾಣುವುದಿಲ್ಲ. ಹಾಗಾಗಿ ಮಾದಪ್ಪನ ಪರಂಪರೆಯನ್ನು, ಅವೈದಿಕ ಕುಲ ಸಂಸ್ಕೃತಿಗಳೆಂದೇ ಇಲ್ಲಿ ಗುರುತಿಸಬಹುದು.

ಮಾದಪ್ಪನ ಕುಲ ಸಮುದಾಯಗಳಲ್ಲಿ ಗುಡ್ಡನನ್ನು ಬಿಡುವ ಆಚರಣೆ ಮತ್ತು ಗುಡ್ಡನ ಪರಂಪರೆಯೊಳಗಿನ ನಡಾವಳಿಗಳು ತನ್ನದೇ ಆದ ನೈತಿಕತೆಯನ್ನು ಒಳಗೊಂಡಿದೆ. ಮಾದಪ್ಪನ ಪರಂಪರೆಯೊಳಗೆ ಗುಡ್ಡರಿಗೆ ಅವರದೇ ಆದ ಜೀವನ ವಿಧಾನವಿದೆ. ಆತ ಕುಟುಂಬದ ಒಳಗೆ ಮತ್ತು ಹೊರಗೆ ತನ್ನದೇ ಆದ ಕರ್ತವ್ಯಗಳನ್ನು ನಿರ್ವಹಿಸಬೇಕಾಗುತ್ತದೆ. ಅದಕ್ಕೆ ಪೂರಕವಾಗಿ ಮಾದಪ್ಪನ ಪರಂಪರೆಯಲ್ಲಿ ನಂಬಿಕೆ, ಆಚರಣೆಗಳು ಕಂಡುಬರುತ್ತದೆ.

> "...ಅಂದ್ರ ಗುಡ್ಡಾದ ಮೇಲೆ
> ಎಲ್ಲಾ ಮನೆಗೋಗಿ
> ಭಿನ್ನ ಮಾಡ್ಬೇಕು
> ಪೂಜೆ ಮಾಡ್ಬೇಕು
> ಜಾತಿ ಭೇದವಿಲ್ಲೇಳಿ
> ಯೆತ್ತಮನೆ ಜೋತಿ
> ಸತ್ತ ಮನೆ ಜೋತಿ
> ವನ್ನಯ್ಯನ ಮನೆ ಜೋತಿ
> ಚೆನ್ನಯ್ನ ಮನೆ ಜೋತಿ
> ಕುರುಬ್ರ ಮನೆ ಜೋತಿ,
> ಕುಂಬಾರ್ರ ಮನೆ ಜೋತಿ
> ಹದ್ನೆಂಟು ಮನೆವೊಳ್ಗ
> ಉರಿವಂತ ಜೋತಿ
> ಇದು ಗುಡ್ಡ ಅಂದರೆ,
> ಆದ್ರಿಂದ ಬಸವ್ನ
> ಬುಡಪ್ಪ ಅಂದಾಗ
> ಆ ಹುಡುಗ್ನ ಕರ್ಕಂಡೋಗಿ
> ಅಸೆಮಣೆಮ್ಯಾಲ ಕೂರಿಸ್ತಾರೆ..."[4]

ಇಲ್ಲಿ ಗುಡ್ಡನನ್ನು ಬಿಡುವ ಆಚರಣೆಯ ಸಂದರ್ಭವನ್ನು ಹೇಳುತ್ತಾ, ಗುಡ್ಡನಾಗುವವನಿಗೆ ಯಾವುದೇ ಭಿನ್ನ–ಬೇಧವಿಲ್ಲ, ಜಾತಿಯಿಲ್ಲ, ಸೂತಕವಿಲ್ಲ ಜ್ಯೋತಿಯಂತೆ ಎಲ್ಲಿ ಬೇಕಾದರೂ ಬೆಳಗಬಹುದು ಎಂಬುದರ ಸಂಕೇತವಾಗಿದೆ. ದೀಕ್ಷೆ ಪಡೆದಂತಹ ವ್ಯಕ್ತಿ ಮುಂದೆ ಯಾವ ವೃತ್ತಿಯನ್ನು ಬೇಕಾದರೂ ಮಾಡಬಹುದು. ಜೊತೆಗೆ ಹಬ್ಬ–ಹರಿದಿನಗಳಲ್ಲಿ ನಾಲ್ಕು ಮನೆ ಭಿಕ್ಷಾ ಮಾಡಿ, ದೇವರಿಗೆ ಅದೇ ಅಕ್ಕಿಯಲ್ಲಿ ಅಥವಾ ಹಣದಲ್ಲಿ ಅಡುಗೆ ಮಾಡಿ ಪೂಜಿಸಬೇಕು. ಇದು ಎಲ್ಲ ಗುಡ್ಡರ ಪ್ರಮುಖ ಕರ್ತವ್ಯವಾಗಿದೆ. ಗುಡ್ಡನಾದ ವ್ಯಕ್ತಿ ತನ್ನ ಸಮುದಾಯವನ್ನು ಮುನ್ನಡೆಸುವ, ಧಾರ್ಮಿಕ ವಿಧಿ–ವಿಧಾನಗಳನ್ನು ಮಾಡುವ ಮುಖ್ಯಸ್ಥನಾಗಿರುತ್ತಾನೆ. ಆತನಿಗೆ ಪರಂಪರೆಯ ಒಳಗೆ ವಿಶೇಷ ಸ್ಥಾನವಿರುತ್ತದೆ.

ಇಲ್ಲಿ ಗುಡ್ಡನನ್ನು ಬಿಡುವುದೆಂದರೆ 'ಬಸವ'ನನ್ನಾಗಿ ಮಾಡುವುದು. ಅದು ಎಲ್ಲಿ ಬೇಕಾದರೂ ಮೇಯಬಹುದು. ಅಂದರೆ ಅದಕ್ಕೆ ಜಾತಿ–ಮತಗಳ ಕಟ್ಟಿಲ್ಲವೆಂದು ಸೂಚಿಸುವುದೇ ಆಗಿದೆ. ಇಂತಹ ಮಾದಪ್ಪನ ಕುಲ ಸಮುದಾಯದ ಆಚರಣೆಗಳು ಆ ಸಮುದಾಯದ ನೈತಿಕ ಶಕ್ತಿಯೆಂದು ಹೇಳಬಹುದು.

[4]. ಡಾ. ಕೆ. ಕೇಶವನ್ ಪ್ರಸಾದ್, ಮಲೆ ಮಾದೇಶ್ವರ, ಪು. 472–473

ಇಂತಹ ಸಮುದಾದ ಐಡೆಂಟಿಟಿಯನ್ನು, ಬದುಕಿನ ಚಹರೆಗಳನ್ನು ಒಂದು ಸಾಂಸ್ಕೃತಿಕ ಮೌಲ್ಯಗಳನ್ನು ಈ ಪರಂಪರೆ ಇಂದಿಗೂ ಉಳಿಸಿಕೊಂಡು ಬಂದಿದೆ. ಗುಡ್ಡನಾದ ವ್ಯಕ್ತಿ ಯಾವ ಜಾತಿಯ ಮನೆಗೆ ಬೇಕಾದರೂ ಹೋಗಿ ಪೂಜೆ ಮಾಡಬಹುದು. ಅವನಿಗೆ ಜಾತಿಯ ಕಟ್ಟಿರುವುದಿಲ್ಲ. ಸೂತಕವಿರುವುದಿಲ್ಲ. ಯಾರ ಮನೆಯಲ್ಲಿ ಬೇಕಾದರೂ ಊಟ ಮಾಡಬಹುದು ಮತ್ತು ಗುಡ್ಡನ ದೀಕ್ಷೆ ಪಡೆಯುವಾಗಲೂ ಅಷ್ಟೇ. ಎಲ್ಲಾ ಜಾತಿಯ, ಕುಲ, ಸಮುದಾಯದ ವ್ಯಕ್ತಿಗಳಿಗೂ ನೀಡಲಾಗುತ್ತದೆ. ಗುಡ್ಡರು ಅಷ್ಟೇ ಯಾವುದೇ ಜಾತಿಯ ಮನೆಯವರು ಪೂಜೆಗೆ ಕರೆದರೆ ಅವರ ಮನೆಗೆ ಹೋಗಿ ಮಾದಪ್ಪನನ್ನು ಪೂಜಿಸಿ, ಮಾದಪ್ಪನ ಕಥೆಯನ್ನು ಹಾಡಿಕೊಂಡು, ಮಾದಪ್ಪನನ್ನು ಹಾಡಿನ ಮೂಲಕ ಕೊಂಡಾಡಿ ಮಾದಪ್ಪನ ಪರಂಪರೆಯನ್ನು ಉಳಿಸಿಕೊಂಡು ಬರುವ ಪ್ರಚಾರಕರಾಗಿ ಪ್ರಸಾರಕರಾಗಿ ಕಂಡುಬರುತ್ತಾರೆ. ಹೀಗೆ ದೇವರ ಗುಡ್ಡರ ಪರಂಪರೆ ಜಾತಿಯನ್ನು ಮೀರಿ ಕುಲ ಸಮುದಾಯಗಳನ್ನು ಒಗ್ಗೂಡಿಸುವ ಕೆಲಸ ಮಾಡುತ್ತದೆ ಎಂದರೆ ತಪ್ಪಾಗುವುದಿಲ್ಲ.

ಮಾದಪ್ಪನ ಕುಲ ಸಮುದಾಯದಲ್ಲಿ ಗುಡ್ಡರಿಗೆ ಒಂದು ವಿಶೇಷವಾದ ಸ್ಥಾನವಿದೆ. ಅವರನ್ನು ಎಲ್ಲರೂ ಗೌರವಿಸುತ್ತಾರೆ. ಇವರು ಮಾದಪ್ಪನ ಸಿಸು ಮಕ್ಕಳೆಂದು (ಮಾದಪ್ಪನ ಮಕ್ಕಳು) ಆ ಸಮುದಾಯದಲ್ಲಿ ಭಾವಿಸುತ್ತಾರೆ. ಮಾದಪ್ಪ–ಗುಡ್ಡರದು, ವೈದಿಕ ರೀತಿಯ ಗುರು–ಶಿಷ್ಯ ಸಂಬಂಧವಲ್ಲ. ಅದನ್ನೂ ಮೀರಿದ ತಂದೆ–ಮಕ್ಕಳ ಸಂಬಂಧದಂತೆ. ಗುಡ್ಡರಿಗೆ ಜಾತಿ ಸೂತಕವಿಲ್ಲ. ಅವರು ಯಾವ ಜಾತಿ–ಕುಲಸ್ಥರ ಮನೆಗೆ ಹೋಗಿ ಧಾರ್ಮಿಕ ಕಾರ್ಯಗಳನ್ನು ಕೈಗೊಳ್ಳಬಹುದು. ಈ ಸಮುದಾಯದ ಜನರಿಗೆ ಗುಡ್ಡರು ಮಾದಪ್ಪನ ಪ್ರತಿರೂಪವೇ ಆಗಿರುತ್ತಾರೆ. ಹಿರಿಯರು, ಕಿರಿಯರೆಂಬ ಭೇದವಿಲ್ಲದೆ ಎಲ್ಲರೂ ಗುಡ್ಡನಿಗೆ ನಮಸ್ಕರಿಸುತ್ತಾರೆ. ಆದ್ದರಿಂದ ಗುಡ್ಡ ಈ ಪರಂಪರೆಯ ಒಳಗೆ ಜಾತ್ಯತೀವಾಗಿ ನಿಲ್ಲುತ್ತಾರೆ. ಈ ಗುಡ್ಡರಿಗೆ ಮಾದಪ್ಪನ ಹಾಡು, ಕಥೆ, ಜೋಳಿಗೆ, ಕಂಸಾಳೆ ಎಂದರೆ ವಿಶೇಷ ಗೌರವ ಮತ್ತು ಭಕ್ತಿ. ಇವರು ಸಹ ಜೋಳಿಗೆ ಹಿಡಿದು ಕಂಸಾಳೆ ಬಾರಿಸುತ್ತಾ ಕ್ವಾರಣ್ಯ ಸಾರುತ್ತಾ ಭಿಕ್ಷೆಗೆ ಹೋಗುತ್ತಾರೆ. ಎಲ್ಲಾ ಜಾತಿಯ ಮನೆಗಳಲ್ಲೂ ಭಿಕ್ಷೆ ಸ್ವೀಕರಿಸುತ್ತಾರೆ. ಇವರದು ಒಂದು ರೀತಿಯ ಸಾರ್ವತ್ರಿಕ ಬದುಕು.

ಕರುಳು ಬಳ್ಳಿಯ ಸಂಬಂಧವನ್ನು ಸೂಚಿಸುವ **'ಕುಲ'** ಎಂಬ ಪದ ನೇಗಿಲ **'ಕುಳ'** ಅರ್ಥಕ್ಕೆ ಸಮೀಪವಾಗಿದ್ದು, ಇದು ನೆಲವನ್ನು ಉತ್ತುವ ಶ್ರಮಿಕ ವರ್ಗವಾಗಿ, ಅವರುಗಳ ಒಗ್ಗಟ್ಟಿನ ಸಂಕೇತವಾಗಿ ಈ ಪದ ಕಂಡುಬರುತ್ತದೆ. ಅಂದರೆ ಕುಲದಲ್ಲಿ ನಮ್ಮ ಐಡೆಂಟಿಟಿಯನ್ನು ಕಂಡುಕೊಳ್ಳಬೇಕಾದರೆ ಶ್ರಮಿಕ ಸಮುದಾಯಗಳು ನಾವೆಲ್ಲರೂ ಒಂದು ಎಂಬ ಭಾವನೆಯೇ ಕುಲತತ್ವವಾಗಿ ಹೊರಹೊಮ್ಮುತ್ತದೆ ಮತ್ತು ಕುಲ ಸಮುದಾಯಗಳ ನೈತಿಕತೆ ಮತ್ತು ಒಗ್ಗಟ್ಟೇ ಕುಲತತ್ವವಾಗುವುದನ್ನು ಇಲ್ಲಿ ಗುರುತಿಸಲಾಗಿದೆ. ಈ ಕುಲತತ್ವವನ್ನು ಹೊಂದಿರುವ ಕುಲ ಸಂಸ್ಕೃತಿಗಳು ಮಾತೃಮೂಲೀಯವಾಗಿದ್ದು, ಇಂತಹ ಕುಲ ಸಂಸ್ಕೃತಿಯ ಮೂಲಕವೇ ಶ್ರಮಣ ಪರಂಪರೆಗಳು ಭಾರತೀಯ ಎನ್ನುವ ಜಗತ್ತಿನಲ್ಲಿ ಚಾರಿತ್ರಿಕವಾಗಿ ಬೆಳೆದು ಬಂದಿವೆ ಎಂದು ವಿದ್ವಾಂಸರು ಹೇಳುತ್ತಾರೆ. ಹಿಂದುತ್ವವೆನ್ನುವುದು ಭಾರತದ ಏಕರೂಪಿ ಅನನ್ಯತೆಯಾಗಿ ಸಂಘಟಿತವಾಗುತ್ತ, ವಸಾಹತುಶಾಹಿಯ ಸಂದರ್ಭದಲ್ಲಿ ತನ್ನ ಯಜಮಾನಿಕೆಯನ್ನು ಭದ್ರಪಡಿಸಿಕೊಂಡು ಇಂದಿಗೂ ಸಾಂಸ್ಕೃತಿಕ, ರಾಜಕೀಯವಾಗಿ ಗಟ್ಟಿಗೊಳ್ಳುತ್ತಿದೆ. ಇಂತಹ ಏಕರೂಪಿ ಸಂಸ್ಕೃತಿಗಿಂತ ಭಿನ್ನವಾದ ಬಹುರೂಪಿ ಕಲಾಚಾರಗಳು ಮಾದಪ್ಪನ ಮತ್ತು ಮಂಟೇಸ್ವಾಮಿಯಂತಹ ಪರಂಪರೆಗಳಲ್ಲಿ ಕಾಣಬಹುದು. ಆದ್ದರಿಂದ ಈ ಸಮುದಾಯಗಳ ಕುಲಮೂಲೀಯ ಸಂಬಂಧಗಳನ್ನು ಗುರುತಿಸಿ, ಅರ್ಥೈಸಿಕೊಂಡಾಗ ಈ ಪರಿಕಲ್ಪನೆಗಳ ಗ್ರಹಿಕೆಯೇ ಬದಲಾಗುತ್ತದೆ. ಇಂದು ಎಲ್ಲರೂ ಕರೆಯುವ 'ಜಾತಿ' ಎನ್ನುವಂತಹ ಸಾಮಾನ್ಯ ಅರ್ಥವನ್ನು ಮೀರಿ, ಮಾದಪ್ಪನ ಕಥೆಯಲ್ಲಿ ಅವೈದಿಕ ಕುಲ ಸಮುದಾಯಗಳು ಕಂಡುಬರುವುದನ್ನು ಇಲ್ಲಿ ಗಮನಿಸಲಾಗಿದೆ.

**ಉಪಸಂಹಾರ**

ಹೀಗೆ ಮಾದಪ್ಪನ ಪರಂಪರೆಯಂತಹ ಕನ್ನಡ ಪರಂಪರೆಗಳು ಬ್ರಾಹ್ಮಣೇತರ ಸಮುದಾಯಗಳನ್ನು ಕೀಳರಿಮೆಯಿಂದ ಬಿಡಿಸಿಕೊಂಡು, ತನ್ನ ಸಂಸ್ಕೃತಿಯ ಬೇರುಗಳನ್ನು ಗಟ್ಟಿಗೊಳಿಸಲು ಆಧಾರವಾಗಿ ನಿಲ್ಲುತ್ತದೆ. ತಳ ಸಮುದಾಯ ಮತ್ತು ದಲಿತರ ಬಹುರೂಪಿ ಕಲಾಚಾರವನ್ನು ಪುನರ್ ಸ್ಥಾಪಿಸಿ, ಏಕರೂಪಿತನವನ್ನು ಒಡೆದು ನಿಲ್ಲುವ ಸಾಂಸ್ಕೃತಿಕ ತಾಕತ್ತನ್ನು ಈ ಪರಂಪರೆಯ ಕುಲ ಸಮುದಾಯಗಳು ಹೊಂದಿದೆ.

**ಪರಾಮರ್ಶನ ಗ್ರಂಥಗಳು**


- ಡಾ. ಕೆ. ಕೇಶವನ್ ಪ್ರಸಾದ್ (ಸಂ)– 'ಮಲೆ ಮಾದೇಶ್ವರ'
  ಕನ್ನಡ ವಿಶ್ವವಿದ್ಯಾಲಯ, ಹಂಪಿ
  1997
- ಡಾ. ಡಿ. ಡೊಮಿನಿಕ್ – 'ಏಕರೂಪಿತನದ ಅಪಕಲ್ಪನೆಗಳು'
  ಪ್ರಗತಿ ಗ್ರಾಫಿಕ್ಸ್, ಬೆಂಗಳೂರು
  2008
- ಡಾ. ವೆಂಕಟೇಶ ಇಂದ್ವಾಡಿ – 'ಮಲೆಯ ಮಾದಪ್ಪನ ಕಾವ್ಯ: ಸಾಂಸ್ಕೃತಿಕ ಮುಖಾಮುಖಿ'
  ಕನ್ನಡ ವಿಶ್ವವಿದ್ಯಾಲಯ, ಹಂಪಿ
  2008
- ಹುಲಿಕುಂಟೆ ಮೂರ್ತಿ – 'ಪರಂಜ್ಯೋತಿ'
  ಅಂಕ ಪ್ರಕಾಶನ, ಬೆಂಗಳೂರು
  2006
- ಡಿ.ಆರ್. ನಾಗರಾಜ್ – 'ಸಂಸ್ಕೃತಿ ಕಥನ'
  ಕನ್ನಡ ಮತ್ತು ಸಂಸ್ಕೃತಿ ಇಲಾಖೆ2000